ದಿನಾಂಕ 30/01/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪಾಟೀ ಸವಾಲು :- ಶ್ರೀ ಎಂ ಎನ್ ಜಿ ಪ್ರತಿವಾದಿ 7 ಮತ್ತು 11 ರವರ ಪರ ವಕೀಲರಿಂದ**

ನನ್ನ ತಂದೆ ರಂಗಶಾಮಣ್ಣ ಮರಣ ಹೊಂದಿರುತ್ತಾರೆ. ಅವರು ತೀರಿಕೊಂಡು 25 ವರ್ಷಳಾಗಿದೆ. 1 ನೇ ಪ್ರತಿವಾದಿ ನನ್ನ ತಾಯಿ ಜೀವಂತ ಇರುತ್ತಾರೆ ಎಂದರೆ ಸರಿ. ನನ್ನ ತಂದೆಗೆ 7 ಜನ ಮಕ್ಕಳು ಅವರಲ್ಲಿ ಒಬ್ಬರು ಮದುವೆಗಿಂತ ಪೂರ್ವದಲ್ಲಿ ತೀರಿಕೊಂಡಿರುತ್ತಾರೆ. ನನ್ನ ಹಾಗೂ ರತ್ನಮ್ಮ ಸಾಕಮ್ಮ ಮತ್ತು ನಾಗಮ್ಮ ಇವರ ಮದುವೆಯಾಗಿರುತ್ತದೆ, ಅದೇ ರೀತಿ ನನ್ನ ಸಹೋದರರ ಮದುವೆಯಾಗಿರುತ್ತದೆ ಎಂದರೆ ಸರಿ. ನಾಗಣ್ಣ ಮತ್ತು ರಾಜಣ್ಣ ಒಂದೇ ಮನೆಯಲ್ಲಿ ವಾಸವಿರುತ್ತಾರೆ. ಸಾಕ್ಷಿ ಮುಂದುವರೆದು ಒಂದೇ ಮನೆ ಇದ್ದು ಪ್ರತ್ಯೇಕ ರೂಂಗಳಲ್ಲಿ ವಾಸವಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನನ್ನ ಮದುವೆಯಾಗಿ ಅಂದಾಜು 30 ವರ್ಷಗಳಾಗಿರುತ್ತದೆ. ನನಗೆ ಈಗ 61 ವರ್ಷ. ನಾನು 2 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ.

ನನ್ನನ್ನು ಹೊಸಕೆರೆ ನಾಗಾರಾಜು.ಪಿ ಎಂಬುವವರಿಗೆ ಮದುವೆಮಾಡಿಕೊಟ್ಟಿರುತ್ತಾರೆ. ಅದೇ ರೀತಿ ನನ್ನ ಮದುವೆಯಾಗಿ 3 ವರ್ಷ 2 ನೇ ಪ್ರತಿವಾದಿ ಮದುವೆಯಾಗಿರುತ್ತದೆ. 2 ನೇ ಪ್ರತಿವಾದಿ ಈಗ ಎಷ್ಟು ವರ್ಷ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಅದೇ ರೀತಿ ಸಾಕಮ್ಮನಿಗೆ ಮದುವೆಯಾಗಿ ಎಷ್ಟು ವರ್ಷ ಆಗಿರುತ್ತದೆ ಎಂದರೆ ಗೋತ್ತಿಲ್ಲ. ಅದೇ ರೀತಿ ಸಾಕಮ್ಮನ ಮದುವೆಯಾದ 8 ವರ್ಷಕ್ಕೆ ನಾಗಮ್ಮನ ಮದುವೆಯಾಗಿರುತ್ತದೆ. ನನ್ನ ಸಹೋದರರ ಮದುವೆಯಾಗಿ ಎಷ್ಟು ವರ್ಷ ಆಗಿರುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ. ಎಲ್ಲಾ ಹೆಣ್ಣುಮಕ್ಕಳ ಮದುವೆಯಾದ ನಂತರ ನನ್ನ ಸಹೋದರರ ಮದುವೆಯಾಗಿರುತ್ತದೆ.

ರಾಮಣ್ಣನಿಗೆ 3 ಜನ ಮಕ್ಕಳು ಇರುತ್ತಾರೆ. ಒಬ್ಬ ಗಂಡುಮಗ, ಇಬ್ಬರು ಹೆಣ್ಣುಮಕ್ಕಳು ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ರಾಮಣ್ಣನ ಮಕ್ಕಳನ್ನು ನಾನು ನೋಡಿರುತ್ತೇನೆ. ರಾಜಣ್ಣನಿಗೆ ಮದುವೆಯಾಗಿದೆ ಅವರ ಹೆಂಡತಿ ಮಕ್ಕಳ ಬಗ್ಗೆ ನನಗೆ

ಗೊತ್ತಿರುವುದಿಲ್ಲ ಮತ್ತು ನಾನು ಅವರನ್ನು ನೋಡಿರುವುದಿಲ್ಲ. ನಾನು ಈ ದಾವೆಯನ್ನು ಯಾರ-ಯಾರ ಮೇಲೆ ಹಾಕಿರುತ್ತೇನೆ ಎಂದರೆ ಸಾಕ್ಷಿ ಮುಂದುವರೆದು ಪ್ರತಿವಾದಿ 7 ರಿಂದ 9 ರವರನ್ನು ಹೊರತುಪಡಿಸಿ ಬೇರೆಯವರೆ ಮೇಲೆ ಹಾಕಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ನಮ್ಮ ವಕೀಲರಿಗೆ ಈ ಮೇಲೆ ಹೇಳಿದವರ ಮೇಲೆ ಈ ದಾವೆ ಹೂಡುವುದಾಗಿ ಮಾಹಿತಿ ನೀಡಿರುತ್ತೇನೆ. ನಾನು ದಾವೆ ಹೂಡುವ ಮುಂಚೆ ಮತ್ತು ನಂತರವಾಗಲೀ ಈ ದಾವೆಯನ್ನು ಯಾರು ಯಾರ ಮೇಲೆ ಹಾಕಲಾಗಿರುತ್ತದೆ ಎಂದು ತಿಳಿದುಕೊಂಡಿರುವುದಿಲ್ಲ. ನನಗೆ ಪ್ರತಿವಾದಿ 7 ರಿಂದ 9 ರವರು ಗೊತ್ತಿರುವುದಿಲ್ಲ ಮತ್ತು ಅವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ.

ನಮ್ಮ ಮದುವೆಗಳಾದ ಮೇಲೆ ರಾಮಣ್ಣ ಮತ್ತು ರಾಜಣ್ಣನವರು ರಂಗಾಪುರದಲ್ಲಿ ವಾಸವಿರುತ್ತಾರೆ. ರಾಮಣ್ಣ ಮತ್ತು ರಾಜಣ್ಣನವರು ವಾಸವಿರುವ ಮನೆಯ ಖಾತ ನಂಬರ್ ಗೊತ್ತಿರುವುದಿಲ್ಲ, ಆದರೆ ಚೆಕ್ಕುಬಂದಿ ಗೊತ್ತಿದೆ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ತಿಗಳರ ಮನೆ, ದಕ್ಷಿಣಕ್ಕೆ ತಿಗಳರ ಮನೆ ಇರುತ್ತದೆ. ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ನಾನು, ನನ್ನ ಅಕ್ಕ-ತಂಗಿಯರು ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ಸಹೋದರರು ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ರಾಜಣ್ಣ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ.

ನಾನು ಮದುವೆಯಾಗಿ ಹೋದ ನಂತರ ತವರುಮನೆಗೆ ಬಂದು ಹೋಗಿತ್ತೀರಾ ಎಂದರೆ ಸಾಕ್ಷಿ ನಮ್ಮ ತಂದೆಯು ತೀರಿಕೊಂಡಾಗ ಬಂದು ಹೋಗಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಗುರುಸಿದ್ದಮ್ಮ ಯಾವ ಮನೆಯಲ್ಲಿ ಯಾರ ಜೊತೆಯಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿ ನನ್ನ ಅಣ್ಣಂದಿರು ಇರುವ ಮನೆಯಲ್ಲಿ ವಾಸವಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಅವರು ಹೋಟಲ್ ನಲ್ಲಿ ಊಟ ತಂದು ತಿನ್ನುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಸತ್ತ ನಂತರ ದಾವಾ ಆಸ್ತಿಗಳನ್ನು ಉಳುಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೆಸರು ರಂಗನಾಥ ಮತ್ತು ರಾಜಣ್ಣ.

ನನ್ನ ತಂದೆ ರಂಗಶಾಮಣ್ಣನಿಗೆ ಏನು-ಏನು ಆಸ್ತಿಗಳು ಇದ್ದವು ಎಂದರೆ ಸಾಕ್ಷಿ ಹೊಲಗಳು ಇದ್ದವು ಎರಡೂಕಾಲೆಕರೆ ಆಸ್ತಿ ಬಂದಿರುತ್ತದೆ ಎಂದು ಉತ್ತರಿಸಿರುತ್ತಾರೆ.

ನಮ್ಮ ತಂದಗೆ ನಿವೇಶನಗಳು ಇರುವುದಿಲ್ಲ. ರಾಮಣ್ಣ-ರಾಜಣ್ಣ ವಾಸವಿರುವ ಮನೆ ಯಾರದು ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಂದೆ ತೆಗೆದುಕೊಂಡಿದ್ದರು ಎಂದು ಉತ್ತರಿಸಿರುತ್ತಾರೆ. ಅದರಲ್ಲಿ ನನಗೆ ಭಾಗ ಇರುತ್ತದೆ ಆದರೆ ನಾನು ಹಾಕಿರುವುದಿಲ್ಲ. ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಜಮೀನಿನ ಸ.ನಂ ನಂಬರ್ 36/1 ಬಿ1 ಮತ್ತು ಸ.ನಂ.36/1 ಬಿ2 ಎಂದು ಉತ್ತರಿಸಿರುತ್ತಾರೆ. ಸದರಿ ಜಮೀನುಗಳು ಎಷ್ಟು-ಎಷ್ಟು ಎಕರೆ ಇರುತ್ತದೆ ಎಂದು ಗೊತ್ತಿರುವುದಿಲ್ಲ ಆದರೆ 2 ಕಾಲು ಎಕರೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಗಳ ದಾಖಲೆಗಳನ್ನು ನಾನು ನೋಡಿರುವುದಿಲ್ಲ ಮತ್ತು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ತಂದೆಗೆ ಅವರ ಅಣ್ಣ-ತಮ್ಮಂದಿರ ವಿಭಾಗಕ್ಕೆ ಸ.ನಂ. 36/1 ಬಿ1 ಅಥವಾ ಸ.ನಂ.36/1 ಬಿ2 ತಾಕು ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆಯ ಅಣ್ಣ-ತಮ್ಮಂದಿರು ಯಾವ ರೀತಿ ಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

ಸ.ನಂ.36/1 ಬಿ1 ಚೆಕ್ಕುಬಂದಿ ಮತ್ತು ವಿಸ್ತೀರ್ಣ ಗೊತ್ತಿರುವುದಿಲ್ಲ. ಸ.ನಂ.36/1 ಬಿ2 ಚೆಕ್ಕುಬಂದಿ ಮತ್ತು ವಿಸ್ತೀರ್ಣ ಗೊತ್ತಿರುವುದಿಲ್ಲ. ವಕೀಲರು ಎಷ್ಟು ಎಕರೆಗೆ ದಾವೆ ಹೂಡಿರುತ್ತಾರೆ ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ. ವಕೀಲರು ದಾವೆಯಲ್ಲಿ ಏನು ಬರೆದಿರುತ್ತಾರೆ ಎಂಬ ಮಾಹಿತಿ ನನಗೆ ತಿಳಿದಿರುವುದಿಲ್ಲ.

ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ